ಬಂದೀತೆಂಬ ಹೆದರಿಕೆ. ಇದು ನಮಗೆ ಗೊತ್ತಿದ್ದರೆ ಅಂಥವರ ಜೊತೆಯಲ್ಲಿ ವ್ಯವಹರಿಸಬಹುದು ಅನ್ನಿ. ಬದುಕಿನಲ್ಲಿ ಸಾಧನೆ ಇದ್ದವನಿಗೆ ಜಾತಿ ಮನಃಸ್ಥಿತಿ ಅಷ್ಟೊಂದು ಭಾವುಕವಾಗಿರುವುದಿಲ್ಲ; ಅದಿಲ್ಲದಿದ್ದಾಗ, ಇದಕ್ಕೇ ಶರಣಾಗುವುದು ಸಾಮಾನ್ಯವೇ ಆಗುತ್ತದೆ. 'ಜಾತ್ಯಂ ಶರಣಂ ಗಚ್ಛಾಮಿ' ಅಂತ ಜಾತಿಗೆ ಶರಣಾಗುವುದು ಸರ್ವೇಸಾಮಾನ್ಯವಾಗುತ್ತದೆ. ತನ್ನ ಮರ್ಯಾದೆಯ ರಕ್ಷಣೆಗೆ ಏನಾದರೂ ಒಂದು ಬೇಕಲ್ಲ? ಅದೇ ಜಾತಿ. ಇದೊಂದು ರೀತಿಯಲ್ಲಿ 'ಸಂಕಟ ಬಂದಾಗ ವೆಂಕಟರಮಣ' ಅಂದಂತೆ ಅಸ್ಮಿತೆಯ ಸಂಕಟ ಬಂದಾಗ ಜಾತಿಯ ವೆಂಕಟರಮಣ ಬೇಕೇಬೇಕಲ್ಲವೆ? ಇಷ್ಟೇ ಅಲ್ಲ ಸ್ವಾಮಿ, ಇನ್ನೂ ಒಂದು ಒಳಗುಟ್ಟು ಇದೆ, ಕೇಳಿ; ನಾನು ಮೊದಲೇ ಹೇಳಿದ್ದೇನಲ್ಲ, ಜಾತಿ ಅಂದರೆ ಗುಂಪು ಅಂತ. ಹಾಗೆ, ಆ ಗುಂಪಿನಿಂದ ಪ್ರಯೋಜನವಿಲ್ಲದೆ ಇಲ್ಲ. ಅಂದರೆ, ವ್ಯಕ್ತಿಯ ಬಲವನ್ನು ಅರ್ಥಾತ್ ಬಾಹ್ಯ ಸಾಮರ್ಥ್ಯವನ್ನು ಹೆಚ್ಚಿಸಿಕೊಳ್ಳಲು ಅಥವಾ ಸಮರ್ಥಿಸಿಕೊಳ್ಳಲು ಈ ಗುಂಪು ನೆರವಿಗೆ ಬರುವ ಸಾಧ್ಯತೆ ಇರುವುದರಿಂದ ವ್ಯಕ್ತಿ ತನ್ನ ಜಾತಿಯ ಅಸ್ಮಿತೆಗೆ ಮೊರೆಹೋಗುವುದು ಸಹಜವೇ ಆಗಿದೆ. ನಮ್ಮ ದೇಶದ ಇಂದಿನ ರಾಜಕೀಯ ವ್ಯವಸ್ಥೆಯಲ್ಲಿ ಇದೇ ಪ್ರಧಾನವಾಗಿದೆಯಲ್ಲ? ಅದಕ್ಕೆ ನೋಡಿ, ಯಾಪಾಟಿ ಭ್ರಷ್ಟಾಚಾರ ದೇಶದ ಸಾಮಾಜಿಕ ಜೀವನದಲ್ಲಿ. ಇಲ್ಲೇ ನನ್ನ ಗೆಳೆಯರೊಬ್ಬರು ಒಮ್ಮೆ ಮಾತಿನ ನಡುವೆ ತನ್ನ ಜಾತಿಯ ಹೆಗ್ಗಳಿಕೆಯನ್ನು ಹೇಳುತ್ತ, 'ನೋಡಿ, ಬೆಂಗಳೂರಿನಲ್ಲಿರೊ ರೌಡಿಗಳ ಪೈಕಿ ಶೇಕಡಾ 15 ಜನರು ನಮ್ಮ ಜಾತಿಯವ್ರೆ ಇದಾರೆ. ಯಾವ ನನ್ಮಗನು ನಮ್ಮನ್ನ ಮುಟ್ಟೋಕ್ಕಾಗೊಲ್ಲ' ಅಂತ ಹೆಮ್ಮೆ ಪಟ್ಟುಕೊಂಡರು. ಈ ಮಾತು ಜಾತಿಯ ಮನಃಸ್ಥಿತಿ ಎಲ್ಲಿಂದ ಎಲ್ಲಿಯವರೆಗೆ ಹಬ್ಬಿಕೊಂಡಿದೆ ಅನ್ನೋದನ್ನು ಸೂಕ್ಷ್ಮವಾಗಿ ತಿಳಿಸುತ್ತದಲ್ಲವೆ? ಈ ಜಾತಿಪದ್ಧತಿ ನೂರಾರು ವರ್ಷಗಳಿಂದ ತನ್ನದೇ ಪರಿಧಿಯೊಳಗೆ ಬೆಳೆಯುತ್ತಾ ಬಂದು, ಹತ್ತುಹಲವಾರು ಆಚರಣೆಗಳನ್ನು ತನ್ನೊಳಗೆ ಅಳವಡಿಸಿಕೊಂಡಿದೆ ಮತ್ತು ಅದನ್ನೇ ಈಗ 'ಕುಲ ಪದ್ಧತಿ' ಅಥವಾ 'ಕುಲ ಶಾಸ್ತ್ರ' ಎಂಬ ಪಂಚಾಂಗ ಇಟ್ಟುಕೊಂಡು, ಜಾತಿ ತೆವರಿನ ಮೇಲೆ ಕುಂತ ಸಮಾಜಶಾಸ್ತ್ರಿಗಳು ತರಾವರಿ ಸಿದ್ಧಾಂತಗಳನ್ನು ಹೆಣೆಯುತ್ತಾ ಬಂದಿದ್ದಾರೆ. ಜಾತಿವಾದಿಗಳು ಅದನ್ನು ನಂಬಿ, ಕುರಿಯಂತೆ ತಲೆ ಆಡಿಸುತ್ತಿದ್ದಾರೆ. ಅಂಥ ಕಡೆ ಬೇರೆಯವರ ಪ್ರವೇಶಕ್ಕೆ ಅವಕಾಶವಿಲ್ಲ. ಅವರು ಹೇಳಿದ್ದೇ ಸೈ. ಇದು ಈಗಿನ ಪರಿಸ್ಥಿತಿ. ಏನು ಮಾಡುವುದು 'ಬೆತ್ತಲೆ ರಾಜ್ಯದಲ್ಲಿ ಬಟ್ಟೆ ಉಟ್ಕೊಂಡವನು ಮಾನಗೆಟ್ಟವನು'. ಮೊದಮೊದಲು ಕಾಯಕಸಮಾನ ಪರಿಸ್ಥಿತಿ ಮತ್ತು ಮನಃಸ್ಥಿತಿಯ ಆಧಾರದ ಐಕ್ಯದ ದೃಷ್ಟಿಯಿಂದ ಒಂದು ಗುಂಪಾಗಿ ಅಸ್ತಿತ್ವಕ್ಕೆ ಬಂದ ಒಂದೊಂದು ಜಾತಿಯು ಕ್ರಮೇಣ ಅನೈಕ್ಯದ ಕುರುಹಾಗಿ ಮೈತಳೆದಿರುವುದು ದುರದೃಷ್ಟ ಎಂದು ನಾವಾದರೂ ಭಾವಿಸಬಹುದು. ಇಷ್ಟೇ ಅಲ್ಲ, ಜಾತೀಯ ಮೇಲ್ಮೆಯನ್ನು ಅಂದರೆ, ಜಾತಿ ಶ್ರೇಷ್ಠತೆಯನ್ನು ಸಮರ್ಥಿಸುವುದಕ್ಕೆ ಹಲವಾರು ತುಂಡು ಮೊಂಡು ಮೂಲಭೂತವಾದಿಗಳು ಇಲ್ಲಸಲ್ಲದ ಪುರಾಣ ಪುಣ್ಯ ಕಥೆಗಳನ್ನು ಜಾತಿಜನ್ಯಕ್ಕೆ ಅಂಟುಹಾಕಿ, ಜಾತಿ ಸಂರಕ್ಷಕರಂತೆ ಪಟ್ಟಾಗಿ ಕುಳಿತು ಪಟ್ಟಭದ್ರರೇ ಆಗಿದ್ದಾರೆ, ಸುಳ್ಳಿನ ಮೇಲೆ ಸುಳ್ಳನ್ನು ಬಿತ್ತುತ್ತಿದ್ದಾರೆ. ಜಾತಿ ಆಧಾರಿತವಾದ ಎಲ್ಲ ಕಥೆಗಳು ಸುಳ್ಳಿನ ವಾಹಕವೇ ಆಗಿವೆ. ಇಂಥವನ್ನೆಲ್ಲ ನೋಡಿಯೇ 'ಪುರಾಣವೆಂಬುದು ಪುಂಡರ ಗೋಷ್ಠಿ' ಎಂದು ವಚನಕಾರ ಅಲ್ಲಮಪ್ರಭು ಅಂದೇ ಸಾರಿದ್ದಾನಲ್ಲ? ಒಳಹೊಕ್ಕು, ಸಾವಧಾನವಾಗಿ ನೋಡಿದರೆ ಎಲ್ಲ ಜಾತಿಗಳೂ ಮೂಲದಲ್ಲಿ ಒಂದೇ ಮರದ ಬೀಜಗಳು ಅಂತನ್ನಿಸುವುದಿಲ್ಲವೆ? ಆ ಮರವೇ ದ್ರಾವಿಡ ಮರ. ಆಮೇಲಾಮೇಲೆ ಆರ್ಯವೇ ಮೊದಲಾದ ಸಂಕರ ಬೀಜಗಳೂ ಸೇರಿಕೊಂಡು ಕಿಂಚಿತ್ ಭಿನ್ನವಾಗಿ ಕಾಣಿಸಿದರೂ ಮೂಲದ ನೆಲೆ ಅದೇ ಆಗಿದೆ.

